**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಚಿಂತಾಮಣಿ**

**ಸಿಸಿ ಸಂಖ್ಯೆ:146/2020**

ಚಾಸಾ: 03
ಫ್ರಾಸಾ: 02

ದಿನಾಂಕ 03.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀನಿವಾಸರೆಡ್ಡಿ |
| ತಂದೆಯ ಹೆಸರು | : | ವೆಂಕಟರೆಡ್ಡಿ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಸಿದ್ದೆಪಲ್ಲಿ ಗ್ರಾಮ |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಆರೋಪಿ ಪರಿಚಯ ಇದ್ದಾರೆ. ಚಾಸಾ 1 ಮತ್ತು 2 ನನ್ನ ತಮ್ಮ ಮತ್ತು ತಮ್ಮನ ಹೆಂಡತಿ. ದಿಃ06.07.2020 ರಂದು ಸೋಮವಾರದ ದಿನದಂದು ಮಧ್ಯಾಹ್ನ 2.30 ರ ಸಮಯದಲ್ಲಿ ಸಿದ್ದೆಪಲ್ಲಿ ಬಸ್ ಸ್ಟ್ಯಾಂಡ್ ಪಕ್ಕ ಖಾಲಿ ಜಾಗ ಇದ್ದು, ಅಲ್ಲಿಗೆ ಆರೋಪಿತರು ಜೆಸಿಬಿ ಟ್ರಾಕ್ಟರ್ ತೆಗೆದುಕೊಂಡು ಬಂದು ಮಣ್ಣು ಒಡೆಯುತ್ತಿದ್ದರು, ಅದಕ್ಕೆ ಚಾಸಾ 1 ಮತ್ತು 2 ರವರು ನ್ಯಾಯಾಲಯದಲ್ಲಿ ತಿರ್ಪು ಆಗುವವರೆಗೂ ಇದನ್ನೆಲಾ ಮಾಡಬೇಡಿ ಎಂದು ಹೇಳಿದ್ದಕ್ಕೆ ಸುಬ್ಬಾರೆಡ್ಡಿ ದೊಣ್ಣೆಯನ್ನು ತೆಗೆದುಕೊಂಡು ಬಂದು ಚಾಸಾ 1 ರವರ ಎಡ ಕಿವಿಗೆ ಹೊಡೆದು, ಅಶೋಕ ಮಚ್ಚು ತೆಗೆದುಕೊಂಡು ಬಂದು ಆತನ ಹಿಂಭಾಗದ ತಲೆಗೆ ಹೊಡೆದಿದ್ದು, ವೆಂಕಟರಾಮರೆಡ್ಡಿ ರಾಡ್ ನ್ನು ತೆಗೆದುಕೊಂಡು ಬಂದು ಚಾಸಾ 1

ರವರ ತಲೆಗೆ ಹೊಡೆದಿರುತ್ತಾನೆ ಆತನಿಗೆ ರಕ್ತ ಬಂದಿರುತ್ತದೆ. ಮಂಜುನಾಥನನ್ನು ಎಳೆದಾಡಿದ್ದು, ಅದೇ ಸಮಯಕ್ಕೆ ಕೃಷ್ಣಪ್ಪ ಹಿಂದಿನಿಂದ ಬಂದು ಕೈಯಿಂದ ಆತನ ಬೆನ್ನಿನ ಮೇಲೆ ಹೊಡೆದಿದ್ದು, ಆತನನ್ನು ಕೆಳಗೆ ಬಿಳಿಸಿ ಹೊಡೆದಿರುತ್ತಾನೆ. ಬಿಡಿಸಲು ಬಂದು ಚಾಸಾ 2 ರವರಿಗೆ ರೂಪಾ, ಮಂಜುಳಾ ಕವಿತಾ ಆಕೆಯನ್ನು ಎಳೆದಾಡಿ ಆಕೆಯ ಬಟ್ಟೆಯನ್ನು ಹರಿದು ಹಾಕಿರುತ್ತಾರೆ. ಮತ್ತು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಚರಂಡಿ ನೀರಿನಲ್ಲಿ ಎಳೆದಾಡಿರುತ್ತಾರೆ. ಚಾಸಾ 4 ಮತ್ತು 5 ರವರ ಗಲಾಟೆಯನ್ನು ನಿಲ್ಲಿಸಿರುತ್ತಾರೆ. ನಂತರ ಪೊಲೀಸರು ಅಲ್ಲಿಗೆ ಬಂದಿರುತ್ತಾರೆ. ಪೊಲೀಸರು ಆಸ್ಪತ್ರೆಯಲ್ಲಿ ನನ್ನನ್ನು ವಿಚಾರಣೆ ಮಾಡಿರುತ್ತಾರೆ. ಸಾಕ್ಷಿಯು ಎಂ ಒ 1 ರಿಂದ 4 ನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ನೀಡಲಾಯಿತು.)**

**ಪಾಟೀ ಸವಾಲು : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಸದರಿ ಬಸ್ ನಿಲ್ದಾಣದ ಪಕ್ಕದಲ್ಲಿದ ಸೈಟು ಚಾಸಾ 1 ರವರಿಗೆ ಸೇರಿದ್ದು ಎಂದರೆ ಸರಿ. ನ್ಯಾಯಾಲಯದ ಚಾಸಾ 1 ರವರ ಪರ ಆದೇಶವಾಗಿದ್ದರೂ ಸಹ ಅದರಲ್ಲಿರುವ ಕಲ್ಲು ಕೂಚಗಳನ್ನು ತೆಗೆದು ಮಣ್ಣು ಒಡೆಯುತ್ತಿದ್ದರು ಎಂದರೆ ಸರಿ. ಆರೋಪಿಗಳು ಅಕ್ರಮ ಗುಂಪು ಕಟ್ಟಿಕೊಂಡು ಬಂದು ಆ ಪೈಕಿ ಆರೋಪಿ ಸತೀಶ ಚಾಸಾ 2 ರವರ ಟಾಪ್ ನ್ನು ಎಳೆದು ಹಾಕಿದ್ದರು ಎಂದರೆ ಸರಿ. ಚಾಸಾ 1 ಮತ್ತು 2 ರವರಿಗೆ ಈ ನಿವೇಶನ ನಮ್ಮದು ಇದರ ತಂಟೆಗೆ ಬಂದರೆ ಪ್ರಾಣ ಸಹಿತ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿದ್ದರು

ಎಂದರೆ ಸರಿ. ಚಾಸಾ 1 ಮತ್ತು 2 ರವರನ್ನು ನಾನು ಚಿಂತಾಮಣಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ ಎನ್ ವಿ ಆರ್ ವಕೀಲರಿಂದಃ**

ದಿಃ06.07.2020 ರಂದು ನಾನು ಹೇಳಿಕೆ ಕೊಟ್ಟಿದ್ದೇನೆ. ಮತ್ತೆ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ. ಆರೋಪಿಗಳ ತಂದೆ ಮತ್ತು ನಮ್ಮ ತಂದೆ ಅಣ್ಣ ತಮ್ಮಂದಿರು ಎಂದರೆ ಸರಿ. ಅಣ್ಣ ತಮ್ಮಂದಿರು ವಿಭಾಗ ಮಾಡಿಕೊಂಡಿದ್ದಾರೆ ನನಗೆ ಗೊತ್ತಿಲ್ಲ. ಅವರಿಗೆ ಬಂದ ಭಾಗದಲ್ಲಿ ಅವರಿದ್ದಾರೆ ನಮ್ಮ ಭಾಗದಲ್ಲಿ ನಾವಿದ್ದೇವೆ ಎಂದರೆ ಸರಿ. ಸದರಿ ಖಾಲಿ ನಿವೇಶನ ಆರೋಪಿತರ ಭಾಗಕ್ಕೆ ಹೋಗಿದ್ದೆ ಎಂದರೆ ಸರಿಯಲ್ಲ ಆ ರೀತಿ ಹೋಗಿಲ್ಲ ಎಂದು ನುಡಿಯುತ್ತಾರೆ. ಆರ್ ಎ 47/2007 ರಂತೆ ಅಪೀಲು ನಡೆಯುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಸತೀಶ್ ಚಿಂತಾಮಣಿಯಲ್ಲಿ ಕೆಲಸ ಮಾಡುತ್ತಾನೆ ಎಂದರೆ ಗೊತ್ತಿಲ್ಲ. 4 ನೇ ಆರೋಪಿ ರಿಟೈರ್ಡ ಟೀಚರ್ ಅವರು ಚಿಂತಾಮಣಿಯಲ್ಲಿ ವಾಸ ಮಾಡುತ್ತಾರೆ ಎಂದರೆ ಸಾಕ್ಷಿಯು ಆಗಾಗ ಊರಿಗೆ ಬರುತ್ತಾರೆ. ಭವ್ಯ ಸಾಫ್ಟವೇರ್ ಕೆಲಸ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅವರು ಬೆಂಗಳೂರಿನಲ್ಲಿ ವಾಸ ಮಾಡುತ್ತಾರೆ ಎಂದರೆ ಗೊತ್ತಿಲ್ಲ.

ಸುಬ್ಬಾರೆಡ್ಡಿ ರವರು ಕಾಂಗ್ರೇಸ್ ಪಕ್ಷದ ನಾಯಕ ಎಂದರೆ ಗೊತ್ತಿಲ್ಲ. ನಾವೆಲ್ಲ ಜೆಡಿಎಸ್ ಪಕ್ಷ ಎಂದರೆ ಸರಿಯಲ್ಲ. ರಾಜಕೀಯವಾಗಿ ಅವರಿಗೆ ಮಟ್ಟ ಹಾಕಬೇಕೆಂದು ಸುಳ್ಳು ಕೇಸು ಹಾಕಿದ್ದೇವೆ ಎಂದರೆ ಸರಿಯಲ್ಲ. ಗಲಾಟೆಯಾಗಿದೆ ಎಂದು ಹೇಳುವ ಜಾಗ

ಬಸ್ಸು ನಿಲ್ಲುವ ಪಕ್ಕದಲ್ಲಿದೆ ಎಂದರೆ ಸರಿ. ಎಲ್ಲರೂ ಬಸ್ ಹತ್ತಿ ಇಳಿದು ಹೋಗುತ್ತಾರೆ ಎಂದರೆ ಸರಿ. ಬಸ್ ನಿಲ್ದಾಣದಲ್ಲಿ ಜಾಸ್ತಿ ಜನ ಇರುತ್ತಾರೆ ಎಂದರೆ ಸರಿಯಲ್ಲ. ಬಸ್ ನಿಲ್ದಾಣದ ಪಕ್ಕ ದೇವಸ್ಥಾನ, ಅರಳಿ ಗಿಡ, ಸರ್ಕಾರಿ ಶಾಲೆ ಇದೆ ಎಂದರೆ ದೂರದಲ್ಲಿದೆ. ಆ ದಿನ ಯಾವುದೇ ಗಲಾಟೆಯಾಗದಿದ್ದರೂ ರಾಜಕೀಯವಾಗಿ ಅವರಿಗೆ ಮಟ್ಟ ಹಾಕಬೇಕೆಂದು ಸುಳ್ಳು ಕೇಸು ಹಾಕಿದ್ದೇವೆ ಎಂದರೆ ಸರಿಯಲ್ಲ. ಸದರಿ ಖಾಲಿ ಜಾಗದಿಂದ ಆರೋಪಿತರನ್ನು ಓಡಿಸಬೇಕೆಂದು ಸುಳ್ಳು ಕೇಸು ಹಾಕಿದ್ದೇವೆ ಎಂದರೆ ಸರಿಯಲ್ಲ. ಎಂ ಒ 1 ರಿಂದ 4 ಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ ನಾನು ನೋಡಿದ್ದೇನೆ. ಎಂ ಒ 1 ರಿಂದ 4 ನ್ನು ಮಂಜುನಾಥ ರವರೇ ಪೊಲೀಸರಿಗೆ ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಚಾಸಾ 1 ರವರಿಗೆ ಹೊಡೆಯುವುದನ್ನು ನೋಡಿದ್ದೇನೆ. ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೇನೆ. ಎಂ ಒ 1 ರಿಂದ 4 ರಿಂದಲೇ ಹೊಡೆದಿರುತ್ತಾರೆ ಎಂದು ನಿರ್ದಿಷ್ಟ ಗುರುತು ಏನು ಇಲ್ಲ ಆ ದಿನ ಅವರು ದೊಣ್ಣೆಯನ್ನು ಹಿಡಿದುಕೊಂಡು ಬಂದಿರುತ್ತಾರೆ. ಎಂ ಒ 4 ಬಟ್ಟೆಯನ್ನು ನನ್ನ ತಮ್ಮನ ಹೆಂಡತಿಯ ಬಟ್ಟೆ ನಾವು ಅವರಿಗೆ ಬಟ್ಟೆ ಹರಿದು ಹೋಗಿದ್ದರಿಂದ ಬೇರೆ ಬಟ್ಟೆಯನ್ನು ತಂದು ಹೊರೆಸಿರುತ್ತೇವೆ ಎಂದು ನುಡಿಯುತ್ತಾರೆ. ಶ್ರೀ ಎನ್ ವಿ ಆರ್ ವಕೀಲರು ಇನ್ನೊಂದು ಹಸಿರು ಬಣ್ಣದ ಬಟ್ಟೆಯನು ತೋರಿಸಿರುತ್ತಾರೆ. ಸಾಕ್ಷಿಯು ಪಿಂಕ್ ಬಣ್ಣದ ಹರಿದ ಟಾಪ್ ನ್ನು ನೋಡಿ ಗುರುತಿಸಿರುತ್ತಾರೆ. ಈ ಹಂತದಲ್ಲಿ ಶ್ರೀ ಎನ್ ವಿ ಆರ್ ವಕೀಲರು ಪ್ರಕರಣ ಪಿ ಎಪ್ ನಂಬರ ಬರೆದಿರುವ ಆರು ಮುದ್ದೆಮಾಲುಗಳಿಗೆ ಎಂದು ತಿಳಿಸಿರುತ್ತಾರೆ. ಸೈಟ್ ವಿಚಾರವಾಗಿ ನಮಗೆ ವೈಶ್ಯಮ್ಯ ಇದೆ

ಎಂದರೆ ಸರಿ. ಅದೇ ವೈಶ್ಯಮ್ಯದಿಂದ ಈ ಕೇಸನ್ನು ಹಾಕಿದ್ದೇವೆ ಎಂದರೆ ಸರಿಯಲ್ಲ. ಚಾಸಾ 1 ಮತ್ತು 2 ನನ್ನ ತಮ್ಮ ಮತ್ತು ತಮ್ಮನ ಹೆಂಡತಿಯಾದ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ, ಚಿಂತಾಮಣಿ.